ಮತ್ತು ಐ.ಎಸ್.ಬಿ. ಯೋಜನೆ ಅಡಿ ಅರ್ಜಿಗಳು ಬಂದಿದ್ದು, ಅವು ಪರಿಶೀಲನೆಯಲ್ಲಿವೆ. ಭೂ ಒಡೆತನ ಯೋಜನೆಯಡಿ ೨ ಕುಟುಂಬಗಳಿಗೆ ೫ ಎಕರೆ ಜಮೀನು ಖರೀದಿಸಿ ನೋಂದಣಿ ಮಾಡಿಸಿಕೊಡಲು ಅನುಮತಿ ನೀಡಲಾಗಿದೆ.

೪) ಉದ್ಭವಿಸುವುದಿಲ್ಲ.

ಕಮಲಾಪುರ ಕ್ಷೇತ್ರಕ್ಕೆ ಅಂಬೇಡ್ಕರ್ ಭವನ

1184-ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಮಲಾಪುರ ಕ್ಷೇತ್ರದಲ್ಲಿರುವ ಅಂಬೇಡ್ಕರ್ ಭವನಗಳೆಷ್ಟು? ಈ ಯೋಜನೆಯಲ್ಲಿ ಎಲ್ಲಿಯಾದರೂ ಈ ಭವನ ಕಟ್ಟಲು ಸರ್ಕಾರ ಯೋಜಿಸಿದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು)

ಅ) ಕಮಲಾಪುರ ಕ್ಷೇತ್ರದಲ್ಲಿ ಯಾವುದೇ ಅಂಬೇಡ್ಕರ್‌ಭವನ ಇಲ್ಲ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ೮.೦೦ ಲಕ್ಷ ರೂ.ಗಳ ವೆಚ್ಚದಲ್ಲಿ ಮಿನಿಅಂಬೇಡ್ಕರ್ ಭವನಗಳನ್ನು ಕಟ್ಟುವ ಯೋಜನೆ ಇದೆ.

ಮೈಸೂರಿನ ವಿಕ್ರಾಂತ್ ಟೈರ್ಸ್ ಕಂಪನಿಯಲ್ಲಿ ನಷ್ಟ

799-ಶ್ರೀ ರಾಮಲಿಂಗರೆಡ್ಡಿ (ಜಯನಗರ) ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು.ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಮೈಸೂರಿನ ವಿಕ್ರಾಂತ್ ಟೈರ್ಸ್ ನಿಯಮಿತವು ೧೯೯೩-೯೪ ಮತ್ತು ೧೯೯೪-೯೫ನೇ ಸಾಲಿನಲ್ಲಿ ನಷ್ಟ ಅನುಭವಿಸಿದೆಯೇ?

೨) ಹಾಗಿದ್ದಲ್ಲಿ ಈ ಅವಧಿಯಲ್ಲಿ ಅನುಭವಿಸಿದ ನಷ್ಟ ಹಾಗೂ ಇಲ್ಲಿಯವರೆಗಿನ ಒಟ್ಟಾರೆ ನಷ್ಟವೆಷ್ಟು?

೩) ನಷ್ಟ ಅನುಭವಿಸಿದ್ದಕ್ಕೆ ಕಾರಣಗಳು ಯಾವುವು?

೪) ಈ ಉದ್ಯಮವನ್ನು ನಡೆಸಿಕೊಂಡು ಹೋಗುವ ನಿಟ್ಟಿನಲ್ಲಿ ಸರ್ಕಾರವು ಪಾಲುದಾರರನ್ನು ಗುರುತಿಸಿದೆಯೇ?

೫) ಹಾಗಿದ್ದಲ್ಲಿ ಆ ನಿಟ್ಟಿನಲ್ಲಿ ವಿವರಗಳಾವುವು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು).

೧) ಹೌದು.